ಕೆ.ಸಿ.ಡಿ.

# ಸಮಾಚಾರ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

ಶಿಕ್ಷಣ-ಸಂಸ್ಕೃತಿ-ಸಮಾಜ ನಮ್ಮ ಧ್ಯೇಯ, ನಿಷ್ಠೆ

KCD JOURNALISM CLUB DHARWAD

ಕರ್ನಾಟಕ ಕಾಲೇಜು ಧಾರವಾಡ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ: ೧ ಸಂಪುಟ: ೧ ಪುಟ: ೧


## ೭೦ ನೇ ಸ್ವಾತಂತ್ರ್ಯೋತ್ಸವ





ಕರ್ನಾಟಕ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ ಧ್ವಜವಂದನೆ ನೆರವೇರಿಸಿ ಮಾತನಾಡುತಿ-ರುವದು. ಡಾ. ಎಸ್ ಎಸ್ ಕಟ್ಟಿಮನಿ, ರಾಜೇಶ್ವರಿ ಮಹೇಶ್ವರಯ್ಯ, ಪ್ರಭಾಕರ್ ಕಾಂಬ್ಳೆ, ಡಾ. ಬಿ. ಎಸ್ ಭಜಂತ್ರಿ ಜಾಥಾದಲ್ಲಿ ಸಾಗುತ್ತಿರುವದು ಚಿತ್ರದಲ್ಲಿ ಕಂಡು ಬಂದಿದೆ.

ಸಂವಿಧಾನದ ಆಶಯಕ್ಕೆನುಗುಣವಾಗಿ ನಡಿದುಕೊಂಡಾಗ ಮಾತ್ರ ಸಧೃಡ ದೇಶ ಕಟ್ಟಲು ಸಾಧ್ಯ, ಆದ್ದರಿಂದ ನಾವೆಲ್ಲರು ಸಂವಿಧಾನದ ಮೂಲ ಆಶಯಗಳಿಗೆ ಪೂರಕವಾಗಿ ನಡೆದುಕೊಂಡಾಗ ಮಾತ್ರ ಉತ್ತಮ ದೇಶದ ಬೆಳವಣಿಗೆಗೆ ಸಾಧ್ಯ ಎಂದು ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ ಸ್ವಾತಂತ್ರ್ಯೋತ್ಸವದ ಧ್ವಜವಂದನೆ ನೆರವೇರಿಸಿ ಮಾತನಾಡಿದರು.

ದೇಶಕ್ಕಾಗಿ ಮಡಿದ ಮಹನೀಯರನ್ನು ನೆನಪಿಸಿಕೊಳ್ಳವುದಕ್ಕೆ ಇದೊಂದು ಸುದಿನವಾಗಿದ್ದು ವಂದೇ ಮಾತರಂ ಎಂಬ ಧ್ಯೇಯ ಘೋಷವು ಸ್ವತಂತ್ರ ಸೇನಾನಿಗಳಲ್ಲಿ ಹೋರಾಟದ ಕಿಚ್ಚು ಉತ್ತೇಜನ ನೀಡುವಂತೆ ಮಾಡಿತು ಎಂದು ಉಲ್ಲೇಖಿಸಿದರು. ನಮ್ಮದು ಪ್ರಜಾಪ್ರಭುತ್ವದ ರಾಷ್ಟ್ರ ನಮ್ಮ ಸಂವಿಧಾನವು ಸದಾ ಪ್ರಜಾ ಪ್ರಭುತ್ವದ ಆಶಯಗಳನ್ನು ಕಾಪಾಡುತ್ತಾ ಬಂದಿದೆ ಅಂತಯೇ ನಾವಿಂದು ಎಪ್ಪತ್ತರ ಸ್ವಾತಂತ್ರದ ಸಂಭ್ರಮದಲ್ಲಿದ್ದಿವೆ ಎಂದ ಅವರು ನಮ್ಮ ದೇಶ ವಿವಿಧ ರೀತಿಯಿಂದ ಅಭಿವೃದ್ಧಿ ಹೊಂದಿದೆ. ಕೈಗಾರಿಕರಣದಿಂದ ಆರ್ಥಿಕ ಅಭಿವೃದ್ಧಿ, ಶೊಷಿತ ವರ್ಗದವರಿಗೆ ಸಮಾನತೆ, ಪಂಚಾಯತ್‌ರಾಜನಿಂದ ಗ್ರಾಮೀಣಾಭಿವೃದ್ಧಿ, ನಿರುದ್ಯೋಗ ನಿರ್ಮೂಲನೆ ಇತ್ಯಾದಿಯಾಗಿ ಅಭಿವೃದ್ಧಿ ಪಥದತ್ತ ಸಾಗುತ್ತಿದೆ ಎಂದು ವಿವ-ರಿಸಿದರು.

ಮುಂದುವರೆದು ಮಾತನಾಡಿದ ಅವರು ಇಂದು ನಮ್ಮ ದೇಶದ ಮೌಲ್ಯಗಳ ಸೊಬಗು ವಿಶಿಷ್ಟವಾದದ್ದು ಆದ್ದರಿಂದ ಕೇಂದ್ರದ ಮಾನವಸಂಪನ್ಮೂಲ ಇಲಾಖೆಯ ಉದ್ದೇಶಗಳನ್ನು ಇಡೇರಿಸಲು ಮಹಾವಿದ್ಯಾಲಯವು ೭೦ನೇ ಸ್ವಾತಂತ್ರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲು ದೇಶದ ಸಂಸ್ಕೃತಿ ಬಿಂಬಿಸಲು ವಿದ್ಯಾರ್ಥಿಗಳಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಹಮಿಕೊಳ್ಳಲಾಗಿದೆ ಎಂದರು. ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಎಲ್ಲಾ ಅಧ್ಯಾಪಕ ವರ್ಗದವರು ಮತ್ತು ಶಿಕ್ಷಕೇತ್ತರ ಸಿಬ್ಬಂದಿ ಹಾಜರಿದ್ದರು. ಎನ್‌ಸಿಸಿ ಮತ್ತು ಎನ್ ಎಸ್ ಎಸ್ ಘಟಕಗಳು ತಮ್ಮ ಪಥಸಂಚಲನದ ಮೂಲಕ ನೆರದಿದ್ದವರ ಗಮನಸೆಳೆದವು.

ದೇಶದ ಪ್ರತಿಯೊಬ್ಬ ಪ್ರಜೆಯು ತನ್ನ ಜವಾಬ್ದಾ-ರಿಯನ್ನು ಅರಿತು ತನ್ನ ಪಾತ್ರವನ್ನು ವಹಿಸಿದರೆ ಮಾತ್ರ ದೇಶವನ್ನು ಸಮೃದ್ದಿಯ ಪಥದತ್ತ ಕೊಂಡೊಯ್ಯಲು ಸಾಧ್ಯ ಎಂದು ಕರ್ನಾಟಕ ವಿಶ್ವವಿದ್ಯಾಲಯ ಕುಲಪತಿ ಪ್ರೋ ಪ್ರಮೋದ ಗಾಯಿ ಅಭಿಪ್ರಾಯ ಪಟ್ಟರು ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ "ಆಜಾದಿ ೭೦" ಎಂಬ ಮೂಂಬತ್ತಿಗಳ ಜಾಥಾವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ದೇಶಕ್ಕೆ ಸ್ವತಂತ್ರ ಸಿಕ್ಕು ೭೦ ವರ್ಷಗಳು ಸಂದಿವೆ ಅನೇಕ ಮಹಾನ ವ್ಯಕ್ತಿಗಳ ಹೋರಾಟ ಫಲದಿಂದ ನಮ್ಮಗೆ ಸ್ವಾತಂತ್ರ್ಯ ಸಿಕ್ಕಿದ್ದು, ಅದನ್ನು ಬಹಳ ಜಾಗರೂಕತೆಯಿಂದ ಉಳಿಸಿಕೊಳ್ಳಬೇಕಾಗಿದೆ. ಆದ್ದರಿಂದ ಇಂದಿನ ಯುವಜನರು ತಮ್ಮ ಜವಾಬ್ದಾ-ರಿಯನ್ನು ಅರಿತು ಸಾಗಿದರೆ ದೇಶವನ್ನು ಪ್ರಗತಿಯತ್ತ ಒಯ್ಯಲು ಸಾಧ್ಯ ಎಂದ ಅವರು ದೇಶವನ್ನು ಕಟ್ಟಲು ಶ್ರಮಿಸಿದ ಎಲ್ಲ ಮಹಾನ ನಾಯಕರನ್ನು ನೆನೆಯುವುದು ನಮ್ಮೆಲ್ಲರ ಕರ್ತವ್ಯ. ಆದ್ದರಿಂದ ವಿದ್ಯಾರ್ಥಿಗಳು ಕೇವಲ ಅಧ್ಯಯನ ಮಾತ್ರವಲ್ಲದೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕೆಂದರು. ಕಾಲೇಜಿನ ಪ್ರಾಚಾರ್ಯರಾದ ಡಾ. ಎಸ್ ಎಸ್ ಕಟ್ಟಿಮನಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಉಪ ಪ್ರಾಚಾರ್ಯರಾದ ಡಾ. ರಾಜೇಶ್ವರಿ ಮಹೇಶ್ವರಯ್ಯ ವಿದ್ಯಾರ್ಥಿ ಮತ್ತು ಗಣ್ಯರನ್ನು ಸ್ವಾಗತಿಸಿದರೆ, ಕಾರ್ಯಕ್ರಮವನ್ನು ಡಾ ಎಂ ಬಿ ಧಳಪತಿ ನಿರೂಪಿಸದರು. ಡಾ ಅಮೃತ ಯಾರ್ದಿ ವಂದಿಸಿದರು. ಕ್ಯಾಂಡಲ್ ಮಾರ್ಚ ಕಾರ್ಯಕ್ರಮವನ್ನು ರಾಷ್ಟ್ರಗೀತೆಯೊಂದಿಗೆ ಮುಕ್ತಾಯ ಗೊಳಿಸಲಾಯಿತು.

– ನಿವೇದಿತಾ.ಬಿ

## ಜಿಮಖಾನಾ ಉದ್ಘಾಟನೆ





ಧಾರವಾಡ ಜಿಲ್ಲಾಧಿಕಾರಿ ಶ್ರೀ ಎಸ. ಬಿ. ಬೊಮ್ಮನಹಳ್ಳಿ ೨೦೧೭-೧೮ ರ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ಮತ್ತು ಇತರ ಕಾರ್ಯಚಟುವಟಿಕೆಗಳ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವದು. ಚಿತ್ರದಲ್ಲಿ ಡಾ ಅರುಣಾ ಹಳ್ಳಿಕೇರಿ, ಡಾ ರಾಜೇಶ್ವರಿ ಮಹೇಶ್ವರಯ್ಯ, ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ ವಿದ್ಯಾರ್ಥಿ ಕಾರ್ಯದರ್ಶಿ ದತ್ ನಿರಂಜನ ಚಿತ್ರದಲ್ಲಿದ್ದಾರೆ.

ವಿದ್ಯಾರ್ಥಿ ಜೀವನದಿಂದ ಮುಂದೆ ಭವಿಷ್ಯತ್ತಿನಲ್ಲಿ ಯಾವದೇ ವೃತ್ತಿಯನ್ನು ಅಥವಾ ಕ್ಷೇತ್ರವನ್ನು ಆಯ್ದುಕೊಂಡಾಗ ಮತ್ತು ಆ ವೃತ್ತಿಯ ಅಧಿಕಾರದಿಂದ ಸಮಾಜದಲ್ಲಿರುವ ಕಟ್ಟಕಡೆಯ ವ್ಯಕ್ತಿಯ ಕಣ್ಣಿರು ಒರಿಸಿದಾಗ ಮಾತ್ರ ಆ ವೃತ್ತಿಯ ತೃಪ್ತಿಭಾವ ಅನುಭವಿಸುವುದು ಒಂದು ಅನನ್ಯ ಅನುಭವವಾಗಿದೆ. ಆದ್ದರಿಂದ ವಿದ್ಯಾರ್ಥಿಗಳಾದ ನೀವು ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಕರ್ನಾಟಕ ಕಲಾ ಮಹಾವಿದ್ಯಾಲಯದ ಹಳೆಯ ಅರ್ಥಶಾಸ್ತ್ರ ವಿಷಯದ ವಿದ್ಯಾರ್ಥಿ ಮತ್ತು ಧಾರವಾಡ ಜಿಲ್ಲಾಧಿಕಾರಿ ಶ್ರೀ ಎಸ. ಬಿ. ಬೊಮ್ಮನಹಳ್ಳಿ ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಸೃಜನಾ ರಂಗಮಂದಿರದಲ್ಲಿ ೨೦೧೭-೧೮ ರ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ಮತ್ತು ಇತರ ಕಾರ್ಯಚಟುವಟಿಕೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿದಾಗ ಅವರಲ್ಲಿ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾಗಲಿದೆ. ಆದ್ದರಿಂದ ಜಿಮಖಾನದಂತಹ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ಸಮಾಜದ ಬಗ್ಗೆ ತಿಳಿಯಲು ಅನುಕೂಲವಾಗುತ್ತದೆ ಎಂದ ಅವರು ಗ್ರಾಮೀಣ ಹಿನ್ನಲೆಯಿಂದ ಬಂದಂತಹ ವಿದ್ಯಾರ್ಥಿಗಳಿಗೆ ಧಾರವಾಡದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ವಿಪುಲ ಅವಕಾಶಗಳಿಗದ್ದು, ಅದಕ್ಕೆ ನಾನೇ ಸಾಕ್ಷಿ ಎಂದು ಹರ್ಷವ್ಯಕ್ತಪಡಿಸಿದರು. ಇಂದಿನ ವಿದ್ಯಾರ್ಥಿಗಳಾದ ನಿವೆಲ್ಲರು ಸ್ಪರ್ಧಾತ್ಮಕ ಮನೋಭಾವನೆಯನ್ನು ಬೆಳೆಸಿಕೂಂಡು ಸ್ಪರ್ಧಾತ್ಮಕ ಜಗತ್ತಿಗೆ ಸಿದ್ದರಾಗಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಕಾಲೇಜಿನಲ್ಲಿ ಅನೇಕ ಜಾಣ್ಮೆ ಶಿಕ್ಷಕರಿದ್ದು ಅವರಿಂದ ನೀವೆಲ್ಲರು ಅವರ ವಿದ್ವತ್ವವನ್ನು ಪಡಿದು ಸಮರ್ಥವಾಗಿ ನಿಮ್ಮ ಕಲಿಕೆಗೆ ಪೂರಕವಾಗಿ ಬಳಸಿಕೊಳ್ಳಬೇಕು ಎಂದ ಅವರು ತಮ್ಮ ತಲೆಮಾ-ರಿನ ಪ್ರಾಧ್ಯಾಪಕರಾದ ಡಾ ಎನ್ ಜಿ ಚಚಡಿ, ಪ್ರೊ.ವಾಯ್ ಎಮ್ ಮಾದರ್, ಮತ್ತು ಶ್ರೀಮತಿ ರಾಧಾಮನಿ ಅಯ್ಯಂಗಾರ ಮತ್ತು ಪ್ರೊ. ಸವಡಿ ಅವರನ್ನು ಈ ಸಂದರ್ಭದಲ್ಲಿ ಅವರ ಕಲಿಕಾ ಬೋಧನೆಯನ್ನು ಸ್ಮರಿಸಿದರು.

ಇಂದಿನ ವಿದ್ಯಾರ್ಥಿಗಳಲ್ಲಿ ಕೀಳಿರಿಮೆಇದ್ದು ಅದನ್ನು ತೋಡೆದು ಹಾಕಿ ಆತ್ಮವಿಶ್ವಾಸವನ್ನು ಹೆಚ್ಚಿಸಕೋಳ್ಳವುದರ ಜೊತೆಗೆ ಆಳವಾದ ಅಧ್ಯಯನದಿಂದ ಯಶಸ್ಸು ಸಾಧ್ಯ ಆದ್ದರಿಂದ ಧಾರವಾಡದಲ್ಲಿರುವ ಸಾಂಸ್ಕೃತಿಕ ಮತ್ತು ಸಾಹಿತ್ಯದ ಕಂಪನ್ನು ನೀವೆಲ್ಲರು ಅನುಭವಿಸಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ ಮಾತನಾಡಿ ಶತಮಾನದ ಹೊಸ್ತಿಲಲ್ಲಿ ನಿಂತಿರುವ ಕರ್ನಾಟಕ ಕಲಾ ಮಹಾವಿದ್ಯಾಲಯವು ಎಲ್ಲ ಸ್ತರದ ವಿದ್ಯಾರ್ಥಿಗಳಿಗೆ ಜ್ಞಾನ ದಾಹವನ್ನು ತಣಿಸುತ್ತಿದ್ದು, ಆದ್ದರಿಂದ ನಿಮ್ಮ ಜವಾಬ್ದಾ-ರಿಯನ್ನು ಅರಿತು ನೀವು ಉತ್ತಮ ಪ್ರಜೆಗಳಾಗಿ ಹೊರಹೊಮ್ಮಿರಿ ಎಂದು ಕರೆ ನೀಡಿದರು.

ಕಾಲೇಜಿನ ಉಪ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಮಖಾನಾದ ಅಧ್ಯಕ್ಷರಾದ ಡಾ ಅರುಣಾ ಹಳ್ಳಿಕೇರಿ ಅತಿಥಿಗಳನ್ನು ಪರಿಚಯಿಸಿದರು. ಕಾಲೇಜಿನ ಎಲ್ಲ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ಹಾಜರಿದ್ದರು. ತೃತೀಯ ವರ್ಷದ ವಿದ್ಯಾರ್ಥಿಗಳಾದ ಅಭಿಷೇಕ ಚೌಕಿಮಠ ಮತ್ತು ನಿವೇದಿತಾ.ಬಿ ಕಾರ್ಯಕ್ರಮವನ್ನು ನಿರೂಪಿಸದರೆ ಜಿಮಖಾನಾದ ವಿದ್ಯಾರ್ಥಿ ಕಾರ್ಯದರ್ಶಿ ದತ್ತ ನಿರಂಜನ ವಂದಿಸಿದರು.

– ಅಭಿಷೇಕ್

## ಯೋಗ ಸ್ಪರ್ಧೆಯಲ್ಲಿ ಚಾಂಪಿಯನ್

ಕುಂದಗೋಳದ ಜಿ ಎಸ್ ಪಾಟೀಲ್ ಕಾಲೇಜಿನಲ್ಲಿ ನಡೆದ ಕರ್ನಾಟಕ ವಿಶ್ವವಿದ್ಯಾಲಯದ ಏಕವಲಯ ಅಂತರ ಮಹಾವಿದ್ಯಾಲಯಗಳ ಯೋಗ ಸ್ಪರ್ಧೆಯಲ್ಲಿ ಕರ್ನಾಟಕ ಕಲಾಮಹಾವಿದ್ಯಾಲಯದ ಪುರುಷರ ತಂಡ ಸತತ ನಾಲ್ಕನೇಬಾರಿಗೆ ಚಾಂಪಿಯನ್ನಾಗಿ ಕಾಲೇಜಿಗೆ ಕೀರ್ತಿತಂದಿದ್ದಾರೆ ಈ ಸಂದರ್ಭದಲ್ಲಿ ಪ್ರಾಚಾರ್ಯರು ವಿದ್ಯಾರ್ಥಿಗಳ ತಂಡಕ್ಕೆ ಶುಭ ಹಾರೈಸಿದ್ದಾರೆ.



ಚಾಂಪಿಯನ್ನಾದ ವಿದ್ಯಾರ್ಥಿಗಳ ತಂಡ

–ಅಂಕಿತ

## ಇಬ್ಬನಿ:



ಇರುಳ ಚಂದಿರನ ಸಖಿಯಾಗಿ
ತಂಬೆಲರಲಿ ಸುಖಿಯಾಗಿ
ಮುಂಜಾನೆಯ ಮೌನದಿ ಮುದ್ದಾಗಿ
ಮಲಗಿರುವಾಗಲೆ ಮರೆಯಾಗುವ ಮಂಜ ಹನಿಯೆ
ರವಿಯ ಸೆಳೆತಕೆ ಸೆರೆಯಾದೆಯೊ
ಚಂದಿರನ ಹುಡುಕಲು ಮರೆಯಾದೆಯೊ
ಮಾನವನಿಗೆದರಿ ಮಾಯವಾದೆಯೊ

–ಕುಮಾರ್


ಪ್ರಧಾನ ಸಂಪಾದಕರು: ಡಾ ಎಸ್ ಎಸ್ ಕಟ್ಟಿಮನಿ, ಸಂಪಾದಕರು: ಡಾ. ಪ್ರಭಾಕರ್ ಕಾಂಬ್ಳೆ, ವಿದ್ಯಾರ್ಥಿ ಸಂಪಾದಕರು: ಸುನೀಲ, ಲಕ್ಷ್ಮಿ ಮೊರಬ, ಅಭಿಷೇಕ್, ನಿವೇದಿತಾ. ಫೋಟೋ ವಿನ್ಯಾಸ: ಶ್ರೀಹರಿ